ದಶಲಕ್ಷ ಯೂನಿಟ್ಟುಗಳು. ಇದರಲ್ಲಿ, ಈ ಸಾಲಿನಲ್ಲಿ ಪಡೆಯಲಾದ ರಾಜ್ಯದ ಪಾಲು 9789.80 ದಶಲಕ್ಷ ಯೂನಿಟ್ಟುಗಳು. ವಿದ್ಯುತ್ ಲಭ್ಯತೆಯಲ್ಲಿ 251.20 ದಶಲಕ್ಷ ಯೂನಿಟ್ಟುಗಳಷ್ಟು ಕಡಿಮೆಯಾಗಿರುತ್ತದೆ. ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಈ ಸಾಲಿನಲ್ಲಿ ಲಭ್ಯವಾದ ವಿದ್ಯುತ್ ಪ್ರಮಾಣದ ವಿವರಗಳು ಈ ಕೆಳಕಂಡಂತಿದೆ:–

ಕ್ರ. ಸಂ.	ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳು	2008–09ನೇ ಸಾಲಿನಲ್ಲಿ ಪಡೆಯಲಾದ ರಾಜ್ಯದ ಪಾಲು (ದಶಲಕ್ಷ ಯೂನಿಟ್ಟುಗಳಲ್ಲಿ)
1	ರಾಮಗುಂಡಂ–ಎನ್.ಟಿ.ಪಿ.ಸಿ–ಹಂತ 1, 2 ಮತ್ತು 3.	4016.28
2	ತಾಲ್ಚೇರ್–ಎನ್.ಟಿ.ಪಿ.ಸಿ.–ಹಂತ–2	2612.60
3	ನೈವೇಲಿ ಲಿಗ್ನೈಟ್ ನಿಗಮದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ–2–ಹಂತ–1 ಮತ್ತು 2 ಹಾಗೂ ವಿದ್ಯುತ್ ಉತ್ಪಾದನಾ ಕೇಂದ್ರ–1–ವಿಸ್ತರಣ	2413.33
4	ಮದ್ರಾಸ್ ಅಣು ವಿದ್ಯುತ್ ಉತ್ಪಾದನಾ ಕೇಂದ್ರ	90.38
5	ಕೈಗಾ ಅಣು ವಿದ್ಯುತ್ ಉತ್ಪಾದನಾ ಕೇಂದ್ರ–ಯೂನಿಟ್ 1,2 ಮತ್ತು 3	657.21
	ಒಟ್ಟು	**9789.80**

1092 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾನಿಲಯಗಳಲ್ಲಿನ ವಿವಿಧ ಕೋರ್ಸ್‌ಗಳು, ಸಂಯೋಜನೆ ಶುಲ್ಕ, ಮುಂದುವರಿಕೆ ಶುಲ್ಕ, ಅರ್ಹತಾ ಶುಲ್ಕ ಒಂದೇ ರೀತಿಯಲ್ಲಿ ಇದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಆ) ಯಾವ ಯಾವ ವಿಶ್ವವಿದ್ಯಾನಿಲಯಗಳು ಎಷ್ಟು ಸಂಯೋಜನಾ ಶುಲ್ಕವನ್ನು ಪಡೆಯುತ್ತಿವೆ (ಸಂಪೂರ್ಣ ವಿವರವನ್ನು ಒದಗಿಸುವುದು)?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಉನ್ನತ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಕೋರ್ಸುಗಳು, ಸಂಯೋಜನೆ ಶುಲ್ಕ, ಮುಂದುವರಿಕೆ ಶುಲ್ಕ, ಅರ್ಹತಾ ಶುಲ್ಕಗಳು ಏಕ ರೂಪದಲ್ಲಿರುವುದಿಲ್ಲ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 2000ದ ಪ್ರಕಾರ ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳು ಸಿಂಡಿಕೇಟ್‌ನ ಅನುಮೋದನೆ ಪಡೆದು, ಶುಲ್ಕ ನಿರ್ಧರಣೆಯನ್ನು ಕಾಲಕಾಲಕ್ಕೆ ನಿಗದಿಪಡಿಸುತ್ತವೆ.

ಆ) ಪ್ರತಿಯೊಂದು ವಿಶ್ವವಿದ್ಯಾನಿಲಯಗಳಲ್ಲೂ ಬೇರೆ-ಬೇರೆ ಕೋರ್ಸುಗಳು ಇದ್ದು, ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಂಯೋಜನಾ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.

101 ಶ್ರೀ ಬಸವರಾಜನ್ ಎಸ್.ಕೆ. : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಅನುದಾನಿತ ಖಾಸಗಿ ಕಾಲೇಜು ಹಾಗೂ ಅನುದಾನರಹಿತ, ಖಾಸಗಿ ಬಿ.ಎಡ್., ಕಾಲೇಜುಗಳ ಸಂಖ್ಯೆ ಎಷ್ಟು; ಸರ್ಕಾರಿ, ಅನುದಾನಿತ, ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಆ) ಈ ಕಾಲೇಜುಗಳಿಗೆಂದು ಸರ್ಕಾರದಿಂದ ನಿಗದಿಪಡಿಸಿರುವ ಸೀಟುಗಳ ಸಂಖ್ಯೆ ಎಷ್ಟು; ಸರ್ಕಾರಿ ಅನುದಾನಿತ, ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಇ) ಈ ಕಾಲೇಜುಗಳಿಗೆ ಸರ್ಕಾರ ನಿಗದಿಪಡಿಸಿರುವ ಶುಲ್ಕ ಎಷ್ಟು; ಸರ್ಕಾರಿ ಅನುದಾನಿತ ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಈ) ಒಂದು ವರ್ಷದಲ್ಲಿ ಬಿ.ಎಡ್., ಉತ್ತೀರ್ಣರಾದ ಶೇಕಡವಾರು ಅಭ್ಯರ್ಥಿಗಳ ಸಂಖ್ಯೆ ಎಷ್ಟು; ಸರ್ಕಾರಿ ಅನುದಾನಿತ ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಉ) ಹೀಗೆ ಉತ್ತೀರ್ಣರಾದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವ ಕಾಶವನ್ನು ಕಲ್ಪಿಸಿ ಕೊಡಲಾಗಿದೆ (ಕಳೆದ ಮೂರು ವರ್ಷಗಳ ವರ್ಷಾವಾರು ವಿವರ ನೀಡುವುದು)?